2ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ
ಸಿ.ಸಿ.ನಂಃ 5554 ಃ 2015

ಪಿ ಡಬ್ಲ್ಯೂ 5

ಪ್ರಮಾಣ ವಚನ ಬೋಧಿಸಿದ ದಿನಾಂಕ ಃ 24.03.2026

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾನು ನನ್ನ ಮಗಳು ಆರೋಪಿ ಕಚೇರಿಗೆ ಖುದ್ದಾಗಿ ಹೋಗಿ ದುಡ್ಡನ್ನು ಕಟ್ಟಿರುತ್ತೇವೆ. ನಾನು ಖುದ್ದಾಗಿ ಪತ್ರಿಕೆಯ ಪ್ರಕಟಣೆಯನ್ನು ನೋಡಿ ಆರೋಪಿ ಕಚೇರಿಗೆ ಹೋಗಿ ಹಣವನ್ನು ಕಟ್ಟಿರುತ್ತೇನೆ. ಸದರಿ ಪತ್ರಿಕೆಯನ್ನು ನಾನು ಪೊಲೀಸರಿಗೆ ಕೊಟ್ಟಿದ್ದು ಇರುವುದಿಲ್ಲ. ನಾನು ಬೇರೆ ಯಾರಿಗೂ ಸಹ ತಿಳಿಸಿದ್ದು ಇರುವುದಿಲ್ಲ. ಸದರಿ ರಶೀದಿಯಲ್ಲಿ ನನ್ನ ಮತ್ತು ನನ್ನ ಮಗಳ ಹೆಸರು ಮತ್ತು ವಿಳಾಸ ಬರೆಯಲಾಗಿತ್ತು ಎಂದರೆ ಸರಿ. 30.05.2014 ರಂದು ಬೈಯಪ್ಪನಹಳ್ಳಿ ರೆಲ್ವೇ ಸ್ಟೇಷನ್ ಗೆ ಬರಲು ತಿಳಿಸಿದ್ದು ನಾವು ಅಲ್ಲಿಗೆ ಹೋಗಿರುತ್ತೇವೆ. ಸದರಿ ರೈಲು ಕಂಟ್ರೋಲ್ ಮೆಂಟ್ ನಿಂದ ಹೊರಡಿತ್ತು ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ಮಧ್ಯಾಹ್ನ 1.00 ಗಂಟೆಗೆ ಬೈಯಪ್ಪನಹಳ್ಳಿ ರೈಲ್ವೆ ಠಾಣೆಗೆ ತಿಂಡಿ ಮುಗಿಸಿಕೊಂಡು ಹೋಗಿರುತ್ತೇವೆ. ಸದರಿ ರೈಲು ಸುಮಾರು 1 ಗಂಟೆಗೆ ಬಂದಿರುತ್ತದೆ. ಕಂಟೋಲ್ ಮೆಂಟ್ ನಿಂದ ಬೈಯಪ್ಪನಹಳ್ಳಿಗೆ 5 ಕಿ.ಮೀ ಅಂತವಿದ್ದು 5 ನಿಮಿಷದಲ್ಲಿ ಬರಬಹುದು ಎಂದರೆ ಸರಿ. ಸದರಿ ರೈಲಿನಲ್ಲಿ ಸುಮಾರು 8 ಬೋಗಿ ಇರಬಹುದು ಎಂದು ಸಾಕ್ಷಿ ಹೇಳುತ್ತಾರೆ. ಪ್ರತ್ಯೇಕವಾದ ರೈಲನ್ನು ಬುಕ್ ಮಾಡಿದ್ದು ಇರುತ್ತದೆ ಮತ್ತು ಎಲ್ಲಾ ಭಕ್ತಾದಿಗಳು ಸದರಿ ರೈಲಿನಲ್ಲಿ ಪ್ರಯಾಣ ಮಾಡಿರುತ್ತಾರೆ. ಆರೋಪಿತರು ಒಂದು ಸಲ ನೀರು ಮತ್ತು ಊಟದ ವ್ಯವಸ್ಥೆ ಮಾಡಿದ್ದರು. ಸದರಿ ರೈಲಿನಲ್ಲಿ ಕಿಚನ್ ಗಾಗಿ ಒಂದು ಬೋಗಿ ಇತ್ತು ಎಂದರೆ ಸರಿ. ಸದರಿ ಬೋಗಿಯಲ್ಲಿ ಅಡುಗೆ ಮಾಡಿ ಎಲ್ಲರಿಗೂ ತಂದು ಕೊಡುತ್ತಿದ್ದರು ಎಂದರೆ ಸರಿ. ಎಲ್ಲರೂ ತಮ್ಮದೇ ಆದ ತಿನ್ನು ಅಭಿರುಚಿ ಇರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಪ್ರಯಾಣಿಕರು ತಮ್ಮದೇ ಆದ ಅಭಿರುಚಿಯನ್ನು ವ್ಯಕ್ತಪಡಿಸಿದ್ದರು ಎಂದರೆ ಸರಿ. ಎಲ್ಲಾ ಪ್ರಯಾಣಿಕರು ತಿಂದ್ದಾರೆ ಎಂದರೆ ಸರಿ. ಮಾರನೇ ದಿನ ಸಂಜೆ ನಾವು ಶಿರಡಿಗೆ ತಲುಪಿರುತ್ತೇವೆ. ರೈಲು ಮದ್ಯದಲ್ಲಿ ಬೇರೆ ರೈಲು ಕ್ರಾಸ್ ಮಾಡುವ ಸಲುವಾಗಿ ನಿಲ್ಲಿಸಿತ್ತು ಎಂದರೆ ಸರಿ.

ಆರೋಪಿತರು ಶಿರಡಿಯಲ್ಲಿ ರೈಲ್ವೆ ನಿಲ್ದಾಣವನ್ನು ಇಳಿದ ನಂತರ 22 ರಾಜ್ ಟ್ರಾವಲ್ಸ್ ಎಂಬ ಬಸ್ ವ್ಯವಸ್ಥೆ ಮಾಡಲಾಗಿತ್ತು ಎಂದರೆ ಸರಿಯಲ್ಲ. ರಜಿನಿ ಎಂಬ ಮ್ಯಾನೇಜರ್ ರವರು ಬಸ್ ವ್ಯವಸ್ಥೆ ಮಾಡಿದ್ದು ನಾವು ಅದರಲ್ಲಿ ಶಿರಡಿಗೆ ಹೋಗಿರುತ್ತೇವೆ. ಸುಮಾರು ದೂರ ಇದ್ದುದ್ದರಿಂದ ಆಟೋದಲ್ಲಿ ಹೋಗಲು ಸಾಧ್ಯವಾಗುವುದಿಲ್ಲ ಎಂದರೆ ಸರಿ. ಎಲ್ಲ ಸಹ ಪ್ರಯಾಣಿಕರಿಗೂ ಸಹ ಬಸ್ ನ ವ್ಯವಸ್ಥೆ ಮಾಡಲಾಗಿತ್ತು ಎಂದರೆ ಸರಿಯಲ್ಲ. ಎಲ್ಲಾ ಜನರಿಗೂ 22 ಲಾಡ್ಜ್ ವ್ಯವಸ್ಥೆ ಮಾಡಲಾಗಿತ್ತು ಎಂದರೆ ಸರಿ. ಮಾನ್ಯೇಜರ್ ರಜಿನಿಯವರು ಸಹ ನಮ್ಮ ಜೊತೆ ಬೆಂಗಳೂರಿಗೆ ಬಂದಿದ್ದರು ಎಂದರೆ ಸರಿ. ಶಿರಡಿ ಮಂದಿರದಲ್ಲಿ ಅವರದೇ ಆದ ಊಟದ ವ್ಯವಸ್ಥೆ ಇತ್ತು ಎಂದರೆ ಸರಿ. ದರ್ಶನಕ್ಕೆ ಟಿಕೆಟ್ ವ್ಯವಸ್ಥೆ ಇರುತ್ತದೆ ಎಂದರೆ ಸರಿ. ಎಲ್ಲರೂ ಸಾಮೂಹಿಕವಾಗಿ ಸಾಲಿನಲ್ಲಿ ನಿಂತು ದರ್ಶನ ಪಡೆಯ ಬೇಕಾಗುತ್ತದೆ ಎಂದರೆ ಸರಿ. ದೇವಸ್ಥಾನದಲ್ಲಿ ಎಲ್ಲರೂ ಸಾಲಿನಲ್ಲೇ ಹೋಗಬೇಕಾಗುತ್ತದೆ ಮತ್ತು ವಿಶೇಷವಾಗಿ ವ್ಯವಸ್ಥೆ ಇರುವುದಿಲ್ಲ ಎಂದರೆ ಸಾಕ್ಷಿಯೂ ಆರೋಪಿತರು ನಮಗೆ ವಿಶೇಷ ದರ್ಶನ ಮಾಡಿಸಿ ಕೊಡುತ್ತೇವೆ ಎಂದು ಹೇಳಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಬೆಂಗಳೂರಿನಿಂದ ಶಿರಡಿಗೆ ಆ ಸಮಯದಲ್ಲಿ 1200/- ರೂ ಟಿಕೆಟ್ ಚಾರ್ಜ್ ಇತ್ತು ಎಂದು ನುಡಿಯುತ್ತಾರೆ. ನಾವು ಇದ್ದ ಜಾಗದಲ್ಲಿ ನಮಗೆ ಮತ್ತು ಉಳಿದವರಿಗೆ ಊಟ ಮತ್ತು ನೀರು ತಂದು ಕೊಟ್ಟಿರುತ್ತಾರೆ. ಕೆಲವರು ಕಾಫಿ ಮತ್ತು ಕೆಲವರು ಟೀ ಕೇಳುತ್ತಿದ್ದರು ಎಂದರೆ ಸಾಕ್ಷಿಯು ನಮಗೆ ಟೀ ತಂದು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಾವು ಹೋಗಿದ್ದ ರೈಲಿನಲ್ಲಿಯೇ ವಾಪಸ್ಸು ಬೆಂಗಳೂರಿಗೆ ಬಂದಿರುತ್ತೇವೆ ಎಂದರೆ ಸರಿ. ನಾನು ಬ್ಯೆಯಪ್ಪನಹಳ್ಳಿ ಪೊಲೀಸ್ ಠಾಣೆಯಲ್ಲಿ ನಾವು ಲಿಖಿತ ದೂರು ಕೊಟ್ಟಿರುವುದಿಲ್ಲ. ಪೊಲೀಸರು ಕರೆದಿದ್ದು ಆದರೆ ಅದರ ದಿನಾಂಕ ನನಗೆ ಈಗ ನೆನಪಿಲ್ಲ. ಬಸವನಗುಡಿ ಪೊಲೀಸ್ ಠಾಣೆಯಲ್ಲಿಯೂ ಸಹ ನನ್ನ ಸ್ವಂತ ಬರವಣಿಗೆಯಲ್ಲಿ ನಾನು ದೂರನ್ನು ಬೆರದುಕೊಟ್ಟಿರುವುದಿಲ್ಲ. ಪೊಲೀಸರು ಆರೋಪಿ ನೀಡಿರುವ ರಶೀದಿಯನ್ನು ನಮ್ಮಿಂದ ಪಡೆದುಕೊಂಡಿರುತ್ತಾರೆ. ಪೊಲೀಸರು ಬರೆದಿದ್ದನ್ನು ನಾನು ಓದಿ ನೋಡಿ ಸಹಿ ಮಾಡಿರುತ್ತೇನೆ. ನಾನು ಪೊಲೀಸ್ ಠಾಣೆಗೆ ಹೋಗಿದ್ದು ಇರುವುದಿಲ್ಲ ಸಹೋದ್ಯೋಗಿಗಳ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಫಿಲ್ಟರ್ ಕಾಫಿ ಕೊಡಲಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸಾವಿರಾರು ಜನರು ಹೋದಾಗ ಸಣ್ಣ ಪುಟ್ಟ ತೊಂದರೆ ಆಗುತ್ತದೆ ಎಂದರೆ ಸರಿ. ನಾನು ಪೊಲೀಸರ ಮತ್ತು ರಾಧಕೃಷ್ಣ ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಮಗಳನ್ನು ಠಾಣೆಗೆ ಕರೆದಿದ್ದು ಇರುವುದಿಲ್ಲ. ನ್ಯಾಯಾಲಯಕ್ಕೂ ಸಹ ನನ್ನ ಮಗಳನ್ನು ಸಾಕ್ಷಿಗಾಗಿ ಕರೆದಿದ್ದು ಇರುವುದಿಲ್ಲ. ನನ್ನ ಮಗಳ ಸ್ನೇಹಿತರು ಪೊಲೀಸ್ ಠಾಣೆಗೂ ಸಹ ಹೋಗಿರುತ್ತಾರೆ. ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

( ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

(ಸಾಹೀಲ್ ಅಹ್ಮದ್ ಎಸ್ ಕುನ್ನಿಭಾವಿ)

2ನೇ ಅ ಮು ಮ ದಂ